ಕರ್ನಾಟಕ ವಿಧಾನ ಸಭೆ ... ಗ್ರಂಥಾಲಯ
KARNATAKA LEGISLATIVE ASSEMBLY RESEARCH AND REFERENCE ...

ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ : DEPARTMENT / SUBJECT ಕರ್ನಾಟಕ ವಿಧಾನ ಸಭೆ ಸಚಿವಾಲಯ

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ ದಿನಾಂಕ : DATE 13/11/2019

# ಮೂರ್ತಿ ವಿರುದ್ಧದ ವಿಚಾರಣೆಗೆ ತಡೆ

ಬೆಂಗಳೂರು: ವಿಧಾನಸಭೆ ಕಾರ್ಯದರ್ಶಿ ಹುದ್ದೆಯಿಂದ ಅಮಾನತ್ತುಗೊಂಡಿರುವ ಎಸ್.ಮೂರ್ತಿ ವಿರುದ್ಧದ ಇಲಾಖಾ ವಿಚಾರಣೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

'ಇಲಾಖಾ ವಿಚಾರಣೆ ರದ್ದುಗೊಳಿಸಬೇಕು' ಎಂದು ಕೋರಿ ಎಸ್. ಮೂರ್ತಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಾದಿಸಿದ ಹಿರಿಯ ವಕೀಲ ಎ.ಎಸ್.ಪೊನ್ನಣ್ಣ, 'ದೋಷಾರೋಪ ಪಟ್ಟಿ ಹೊರಿಸಲು ವೃಂದ ಮತ್ತು ನೇಮಕಾತಿಯ ನಿಯಮ 11ರ ಅಡಿಯಲ್ಲಿ ವಿಶೇಷ ಮಂಡಳಿಗೆ ಮಾತ್ರ ಅಧಿಕಾರವಿದೆ. ಆದರೆ, ಈ ಪ್ರಕರಣದಲ್ಲಿ ಅರ್ಜಿದಾರ ಅಮಾನತುಗೊಳಿಸಲು ವಿಶೇಷ ಮಂಡಳಿ ಅನುಮೋದಿಸಿಲ್ಲ ಹಾಗೂ ಅಷ್ಟಕ್ಕೂ ವಿಶೇಷ ಮಂಡಳಿ ಸಕ್ಷಮ ಪ್ರಾಧಿಕಾರವೂ ಅಲ್ಲ' ಎಂದು ಪ್ರತಿಪಾದಿಸಿದರು.